
ಬಗ್ಗೆ ಅಗಾಧವಾದ ಮಾಹಿತಿಯನ್ನು ಈ ಕೃತಿಯಲ್ಲಿ ಒದಗಿಸಿದ್ದಾರೆ. ಗಮನವಿಟ್ಟು ಓದುವವರಲ್ಲಿ ದೇವದಾಸಿ ಸಮುದಾಯ ಮತ್ತು ಪರಿಕಲ್ಪನೆಯ ಬಗ್ಗೆ ಗೌರವ ಮೂಡುವ ಹಾಗೆ ಈ ಬರವಣಿಗೆಯನ್ನು ಮಾಡಿದ್ದಾರೆ. ಎಂಬತ್ತುತೊಂಬತ್ತರ ದಶಕದಲ್ಲಿ ಪೂರ್ಣಚಂದ್ರ ತೇಜಸ್ವಿಯವರು ವಿಶಾಲವಾದ, ಬೇರೆ ಬೇರೆಯ ಹಿನ್ನೆಲೆಯ ಓದುಗರ ಆಲೋಚನೆಗೆ ಪುಷ್ಟಿಕರವಾದ ಆಹಾರ ಒದಗಿಸುವ ಬರವಣಿಗೆ ಮಾಡಿದ್ದರು. ನಾಗೇಶ ಹೆಗಡೆಯವರು ವೈಜ್ಞಾನಿಕ ಮನೋಧರ್ಮ ಮತ್ತು ಸಮಾಜದ ಬದುಕನ್ನು ಪ್ರಭಾವಿಸಬೇಕಾದ ಬಗೆಯನ್ನು ತಮ್ಮ ಬರವಣಿಗೆಯಲ್ಲಿ ಸೂಚಿಸುತ್ತ ಬಂದಿದ್ದಾರೆ. ಇಂದು ಅಂಥ ಕೆಲಸವನ್ನು ಇನ್ನೂ ದೊಡ್ಡ ಪ್ರಮಾಣದಲ್ಲಿ ಮಾಡುವ ಅಗತ್ಯವಿದೆ. ಜಗದೀಶ ಕೊಪ್ಪ ಅವರು ತಮ್ಮ ಬರವಣಿಗೆಯಲ್ಲಿ ಆ ಹಿರಿಯರ ಹಾದಿಯ ಪಯಣಿಗರಾಗಿದ್ದಾರೆ.

ದೇವದಾಸಿಯರ ಸಾಂಸ್ಕೃತಿಕ ಪಲ್ಲಟಗಳ ಕಥನ ಎಂಬ ಉಪಶೀರ್ಷಿಕೆ ಇರುವ ಈ ಕೃತಿಯಲ್ಲಿ ಹದಿನೈದು ಅಧ್ಯಾಯಗಳಿವೆ. 'ಮೂರನೆಯ ಶತಮಾನದಿಂದ ಹದಿನೆಂಟನೆಯ ಶತಮಾನದವರೆಗೆ ಭಾರತದ ಸಾಮ್ರಾಜ್ಯಗಳ ಆಳ್ವಿಕೆಯ ಸ್ಥಿತಿಗತಿಗಳನ್ನು ಅಧ್ಯಯನ ಮಾಡುತ್ತಾ ದಕ್ಷಿಣ ಭಾರತದ ಶಾಸನ ಸಂಪುಟಗಳನ್ನು ಅಧ್ಯಯನ ಮಾಡುತ್ತಾ ಈವರೆಗೆ ನಾವು ಕಾಣದ ಹಾಗೂ ಗ್ರಹಿಸದೆ ಉಳಿದ ಅಜ್ಞಾತ ಹಾಗೂ ಅಸಾಮಾನ್ಯವಾದ ಲೋಕ ತೆರೆದುಕೊಂಡ ಬಗೆಯನ್ನು ಜಗದೀಶ್ ಈ ಅಧ್ಯಾಯಗಳಲ್ಲಿ ನಿರೂಪಿಸಿದ್ದಾರೆ.

ದಕ್ಷಿಣ ಭಾರತದ ದೇವದಾಸಿ ಸಮುದಾಯದಲ್ಲಿ ಆದ ಪಲ್ಲಟಗಳನ್ನು ಗುರುತಿಸುವುದು ಜಗದೀಶ್ ಅವರ ಮುಖ್ಯ ಆಸಕ್ತಿ. ಮೊದಲ ಮೂರು ಅಧ್ಯಾಯಗಳು ಲೇಖಕರನ್ನು ಕಾಡಿದ ಪ್ರಶ್ನೆಗೆ ತಾತ್ವಿಕವಾದ ಭಿತ್ತಿಯನ್ನು ಒದಗಿಸುತ್ತವೆ. ಭಾರತದ ಸಂಸ್ಕೃತಿಯ ಚರಿತ್ರೆಯಲ್ಲಿ ಮೊದಲ ವಿದುಷಿಯರಾಗಿ, ಅಕ್ಷರಸ್ಥರಾಗಿ, ಬ್ರಾಹ್ಮಣ ವಿದ್ವಾಂಸರ ಸರಿಸಮನಾಗಿ ಬೆಳೆದವರು ದೇವದಾಸಿಯರು. ದೇಗುಲ ಸಂಸ್ಕೃತಿ ಮತ್ತು ನೃತ್ಯ, ಸಂಗೀತ, ನಾಟ್ಯಶಿಲ್ಪಗಳಲ್ಲಿ ಅವರೆಷ್ಟು ಅನಿವಾರ್ಯವಾಗಿದ್ದರು ಅನ್ನುವುದನ್ನು ಮರೆತಿದ್ದೇವೆ ಎಂಬ ವಿಷಾದ, ಇದೊಂದು ಸಾಂಸ್ಕೃತಿಕ




**ಪದಗಳಿವೆ ಎದೆಯೊಳಗೆ**
ದೇವದಾಸಿಯರ ಸಾಂಸ್ಕೃತಿಕ ಪಲ್ಲಟಗಳ ಕಥನ
ಲೇ: ಡಾ. ಎನ್‌ ಜಗದೀಶ್ ಕೊಪ್ಪ
ಪುಟ 352: ಬೆಲೆ 390
ನವಕರ್ನಾಟಕ ಪ್ರಕಾಶನ, ಬೆಂಗಳೂರು
ಫೋನ್: 080–22161900